DW-2: ಶ್ರೀನಿವಾಸ

ದಿನಾಂಕಃ **16.01.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀ ಸವಾಲುಃ ವಾದಿ ಪರವಾಗಿ ಶ್ರೀ ಐ.ಎಸ್.ಎ. ವಕೀಲರಿಂದಃ**

1. ನಾನು 10 ನೇ ತರಗತಿ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ತಾತನ ವಂಶಸ್ಥರ ಬಗ್ಗೆ ನನಗೆ ಗೊತ್ತು. ನಮ್ಮ ಪಿತ್ರಾರ್ಜಿತ ಮತ್ತು ಸ್ವಯಾರ್ಜಿತ ಆಸ್ತಿಗಳ ಬಗ್ಗೆ ನನಗೆ ಗೊತ್ತು. ನಮ್ಮ ಪಿತ್ರಾರ್ಜಿತ ಮತ್ತು ಸ್ವಯಾರ್ಜಿತ ಸ್ವತ್ತುಗಳು ಯಾವ ಗ್ರಾಮದಲ್ಲಿ ಇವೆ ಮತ್ತು ಅವುಗಳ ಸರ್ವೇ ನಂಬರ್ ಗೊತ್ತು. ಆದರೆ ವಿಸ್ತೀರ್ಣಗಳನ್ನು ಹೇಳಲು ಸ್ವಲ್ಪ ಗೊಂದಲವಿದೆ. ನಮ್ಮ ಮೂಲ ವಂಶಸ್ಥರು ಯಂಗಪ್ಪ ಎಂದರೆ ಸರಿ. ಯಂಗಪ್ಪ ರವರಿಗೆ ಹನುಮಕ್ಕ ಮತ್ತು ಚೆನ್ನಮ್ಮ ಎಂಬ ಇಬ್ಬರೂ ಹೆಂಡತಿಯರು ಎಂದರೆ ಸರಿ. ಹನುಮಕ್ಕನಿಗೆ ಭೀಮಪ್ಪ ಒಬ್ಬನೇ ಮಗ ಎಂದರೆ ಸರಿ. ಚೆನ್ನಮ್ಮನಿಗೆ ಅಕ್ಕಲಪ್ಪ ಮತ್ತು ಗುರ್ರಪ್ಪ ಎಂಬ ಇಬ್ಬರೂ ಮಕ್ಕಳು ಎಂದರೆ ಸರಿ. ಯಂಗಪ್ಪ, ಭೀಮಪ್ಪ, ಚೆನ್ನಮ್ಮ, ಅಕ್ಕಲಪ್ಪ ಮತ್ತು ಗುರ್ರಪ್ಪ ರವರನ್ನು ನಾನು ನೋಡಿರುವುದಿಲ್ಲ ಎಂದರೆ ಸರಿ. ಭೀಮಪ್ಪ ರವರಿಗೆ 4 ಜನ ಮಕ್ಕಳಿದ್ದು ಅವರೆಂದರೆ ವೆಂಕರಮಣಪ್ಪ, ಚಿನ್ನಪ್ಪ, ರಾಮಯ್ಯ ಮತ್ತು ಚೆನ್ನಪ್ಪ ಎಂದರೆ ಸರಿ. ವೆಂಕಟರಮಣಪ್ಪ ರವರಿಗೆ ಯಂಗಪ್ಪ, ಗುರ್ರಪ್ಪ ಮತ್ತು ಸುಬ್ಬಮ್ಮ ಮಕ್ಕಳು ಎಂದರೆ ಸರಿ. ಚಿನ್ನಪ್ಪ ರವರಿಗೆ ಗುರ್ರಪ್ಪ, ಸುಬ್ಬಯ್ಯ, ಸುಬ್ಬಮ್ಮ, ಭೀಮಪ್ಪ, ಪಾರ್ವತಮ್ಮ ಮತ್ತು ಲಕ್ಷ್ಮೀದೇವಮ್ಮ ಮಕ್ಕಳು ಎಂದರೆ ಸರಿ. ರಾಮಯ್ಯ ರವರಿಗೆ ಗೌರಮ್ಮ, ಸಿದ್ದಕ್ಕ, ಮಂಗಮ್ಮ, ಹನುಮಕ್ಕ, ವೆಂಕರಮಣಪ್ಪ, ರಾಮಲಕ್ಷ್ಮಮ್ಮ ಮತ್ತು ಸುವರ್ಣಮ್ಮ ಮಕ್ಕಳು ಎಂದರೆ ಸರಿ. ಚೆನ್ನಪ್ಪ ರವರಿಗೆ ಸಂತತಿ ಇಲ್ಲ ಎಂದರೆ ಸರಿ. ಚೆನ್ನಮ್ಮ ರವರ ಹಿರಿಯ ಮಗ ಅಕ್ಕಲಪ್ಪ ರವರಿಗೆ ಯಾವುದೇ ಸಂತತಿ ಇಲ್ಲ ಎಂದರೆ ಸರಿ. ಗುರ್ರಪ್ಪ ರವರಿಗೆ 7 ಜನ ಗಂಡು ಮಕ್ಕಳು ಎಂದರೆ ಸರಿ. ಅವರೆಂದರೆ ವೆಂಕಟಪ್ಪ, ಸುಬ್ಬಯ್ಯ, ವೆಂಕಟೇಶಪ್ಪ, ನಾರಾಯಣಪ್ಪ, ಆದಿಶೇಷಯ್ಯ, ನಾಗೇಂದ್ರಪ್ಪ ಮತ್ತು ಗೋವಿಂದಪ್ಪ ರವರು ಎಂದರೆ

ಸರಿ. ನನ್ನ ತಂದೆ ಹಿರಿಯ ಮಗ ವೆಂಕಟಪ್ಪ ಎಂದರೆ ಸರಿ. ನಮ್ಮ ತಂದೆಗೆ 3 ಜನ ಹೆಂಡತಿಯರಿದ್ದು ಅವರೆಂದರೆ ಲಕ್ಷ್ಮಮ್ಮ, ನಂಜಮ್ಮ ಮತ್ತು ಸರೋಜಮ್ಮ ಎಂದರೆ ಸರಿ. ಲಕ್ಷ್ಮಮ್ಮ ರವರಿಗೆ ಚೆನ್ನಮ್ಮ ಎಂಬ ಮಗಳು ಇದ್ದಾಳೆ ಎಂದರೆ ಸರಿ. ನಂಜಮ್ಮ ರವರಿಗೆ ಅಶ್ವತ್ಥಮ್ಮ ಎಂಬ ಮಗಳು ಇದ್ದಾಳೆ ಎಂದರೆ ಸರಿ. ಸರೋಜಮ್ಮ ರವರಿಗೆ ಅಶ್ವತ್ಥಪ್ಪ, ಮಂಗಮ್ಮ, ಗೌರಮ್ಮ, ಗಂಗಮ್ಮ ಮತ್ತು ಶ್ರೀನಿವಾಸ ಎಂಬ ಮಕ್ಕಳಿದ್ದಾರೆ ಎಂದರೆ ಸರಿ. ನಾನು ಈ ದಾವೆಯಲ್ಲಿ ಚಾಲ್ತಿಯಲ್ಲಿದ್ದಾಗ ಸೇರ್ಪಡೆಗೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆಯ ಪತ್ನಿಯರಾದ ಲಕ್ಷ್ಮಮ್ಮ, ನಂಜಮ್ಮ ಮತ್ತು ಸರೋಜಮ್ಮ ರವರ ಮಕ್ಕಳನ್ನು ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ.

2. ದಾವಾ ಆಸ್ತಿಗಳ ಪೈಕಿ ಸ.ನಂ. 51 ಮತ್ತು 55 ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ. ಸದರಿ ಆಸ್ತಿಗಳು ನಮ್ಮ ಮುತ್ತಾತನ ಹೆಸರಿನಲ್ಲಿವೆ. ನಮ್ಮ ತಾತ ಭೀಮಪ್ಪ, ಅಕ್ಕಲಪ್ಪ ಮತ್ತು ಗುರ್‌ಪ್ಪ ರವರು 6 ಸ್ವತ್ತುಗಳನ್ನು ಖರೀದಿಸಿದ್ದಾರೆ. ಅವುಗಳೆಂದರೆ ಸ.ನಂ. 25/2, 30/1, 40/2, 40/5, 47 ಮತ್ತು 139 ಆಗಿರುತ್ತವೆ. ಸದರಿ ಸ್ವತ್ತುಗಳನ್ನು ಒಟ್ಟು ಕುಟುಂಬದಿಂದ 3 ಜನರು ಖರೀದಿಸಿದ್ದಾರೆ ಎಂದು ತೋರಿಸಲು ಕ್ರಯಪತ್ರಗಳನ್ನು ನಾನು ನೋಡಿದ್ದು ಅವುಗಳನ್ನು ಈ ದಾವೆಯಲ್ಲಿ ಹಾಜರುಪಡಿಸಿರುವುದಿಲ್ಲ. ಸ.ನಂ. 51 ಮತ್ತು 55 ರ ಕ್ರಯಪತ್ರಗಳನ್ನು ದಾವೆಯಲ್ಲಿ ಹಾಜರುಪಡಿಸಿದ್ದೇನೆ. ಸ್ವಯಾರ್ಜಿತ ಆಸ್ತಿಗಳ ಸ.ನಂ. 192, 193, 194, 196, 197, 198, 199, 200, 201, 117, 57 ಮತ್ತು 54 ಆಗಿರುತ್ತವೆ. ಸ.ನಂ. 54 ಮತ್ತು 57 ರ ಸ್ವತ್ತುಗಳನ್ನು ಹೊರತುಪಡಿಸಿ ಉಳಿಕೆ ಸ್ವತ್ತುಗಳು ಬುಗಡೂರು ಗ್ರಾಮದಲ್ಲಿವೆ. 54 ಮತ್ತು 57 ರ ಸರ್ವೇ ನಂಬರ್ ಸ್ವತ್ತುಗಳು ಯರ್ಾಪ್ಪೆ ಗ್ರಾಮದಲ್ಲಿ ಇವೆ. ಸ.ನಂ. 131, 201, 132 ಮತ್ತು 56/2 ರ ಸ್ವತ್ತುಗಳು ನಮ್ಮ ತಂದೆಗೆ ಅವರ ಅತ್ತೆ ಮಾವರವರ ಕಡೆಯಿಂದ ಬಂದಿರುತ್ತವೆ. ನಮ್ಮ ತಂದೆಗೆ ಅವರ ಅತ್ತೆ ಮಾವನಿಂದ ಸ್ವತ್ತುಗಳು ಬಂದಿರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಭೀಮಪ್ಪನ ಮಕ್ಕಳ ಸ್ವಯಾರ್ಜಿತ ಆಸ್ತಿಗಳು ಯಾವುವು ಎಂದು ನನಗೆ

ಗೊತ್ತಿಲ್ಲ. ಸ.ನಂ. 120, 125, 124, 148 ಮತ್ತು 75 ಯರ್ಾಪ್ಪೆ ಗ್ರಾಮದ ಸರ್ವೇ ನಂಬರ್ ಗಳು ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ವಾದಿ ಪರ ವಕೀಲರ ಮುಂದುವರಿದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ಅನುಮತಿ ನೀಡಿ ಮುಂದುವರಿದ ಪಾಟೀ ಸವಾಲಿಗೆ ಮುಂದೂಡಲಾಯಿತು)

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.

ಪಾವಗಡ.